


ಮನೆ ಬಾಗಿಲು ಮುಚ್ಚಿದ್ದರಿಂದ, ತೆರೆದ ಬಾಗಿಲ ಮನೆಯೇ ಅವರದಿರಬೇಕೆಂದು ಊಹಿಸಿ ಅತ್ತ ನಡೆದೆವು.

ಹೊಸಬರ ಮನೆಗೆ ಹೇಗೆ ಹೋಗುವುದೆಂಬ ಸಂಕೋಚದಿಂದಲೇ ಹೊರಗಿದ್ದ ಐದಾರು ಜೊತೆ ಚಪ್ಪಲಿಗಳ ಮಧ್ಯೆ ಜಾಗ ಮಾಡಿಕೊಂಡು ನಮ್ಮಿಬ್ಬರ ಚಪ್ಪಲಿಗಳನ್ನೂ ಬಿಟ್ಟು ಒಳಗಡಿಯಿಟ್ಟಾಗ, ಕುರ್ಚಿಯ ಮೇಲೆ ಬಿಳಿಯ ಪಂಚೆ ಷರಟು ಧರಿಸಿ, ದೊಡ್ಡದಾಗಿ ಕುಂಕುಮ ಇಟ್ಟುಕೊಂಡು ಕುಳಿತಿದ್ದವರು ಎದ್ದು, 'ಕಾಲು ತೊಳೆದುಕೊಂಡು ಬನ್ನಿ' ಎಂದು ಹೊರಗೆ ಇಟ್ಟಿದ್ದ ಪ್ಲಾಸ್ಟಿಕ್ ಬಕೇಟಿನತ್ತ ಕೈತೋರಿಸಿದ್ದಕ್ಕೆ ಇಬ್ಬರೂ ಹೆಜ್ಜೆ ಹಿಂದಿಕ್ಕಿದೆವು. ಒಳ ಬಂದಾಗ ಅಲ್ಲಿದ್ದ ಒಂದು ದಿವಾನ್ ಮತ್ತು ನಾಲ್ಕು ಕುರ್ಚಿಗಳಲ್ಲೂ ಜನ ಕೂತಿದ್ದರಿಂದ ನಾವು ಗೋಡೆ ಬದಿಗೆ ಹಾಕಿದ್ದ ಚಾಪೆಯ ಮೇಲೆ ಕುಳಿತೆವು. ಗೀತಾ ಕಾಲು ತೊಳೆಯಲು ಹೇಳಿದವರಿಗೆ ತಾನು ಮೊದಲೇ ಕರೆ ಮಾಡಿದ್ದನ್ನು ಹೇಳಿದಳು. ಅವರು ತಾವೇ ಫೋನ್‌ನಲ್ಲಿ ಮಾತನಾಡಿದ್ದೆಂದು ಹೇಳಿ, ದೇವರು ಮೈಮೇಲೆ ಬರುವ ಶಾಂತಮ್ಮ 'ಇವರ ಹೆಂಡತಿ' ಎನ್ನುತ್ತ ಇನ್ನೊಂದು ಕುರ್ಚಿಯಲ್ಲಿ ಕುಳಿತಿದ್ದವರನ್ನು ತೋರಿಸಿದರು. ಅವರ ಮುಖದಲ್ಲಿ ಕನಿಷ್ಠ ನಗುವೂ ಮೂಡಲಿಲ್ಲ. ನಾವು 'ನಮಸ್ತೆ' ಎಂದೆವು. ಆ ದೇವಿಯನ್ನು ನೋಡಲು ಕಾತರಳಾಗಿದ್ದ ಗೀತಾ, 'ಅವರೆಲ್ಲಿ?' ಎಂದು ಕೇಳಿದಳು. 'ದೇವಿ ಸ್ನಾನ ಮಾಡಿ ಮಡಿ ಉಟ್ಕೊಂಡು ಬರುತ್ತಾರೆ. ಒಂದೈದು ನಿಮಿಷ ಇರಿ' ಎಂದರು. ನಾನು ಮತ್ತೊಮ್ಮೆ ವಾಚ್ ನೋಡಿಕೊಂಡದ್ದು ನೋಡಿ, ಗೀತಾ, 'ನಿನಗೆ ಲೇಟಾಗುತ್ತೇನೆ, ಪ್ಲೀಸ್ ಕಣೆ ಇವತ್ತೊಂದಿನ' ಎಂದು ದೈನ್ಯದಿಂದ ಪಿಸುಗುಟ್ಟಿದಳು. ನಾನು, 'ಪರವಾಗಿಲ್ಲ, ಹೇಳಿ ಬಂದಿದ್ದೇನೆ' ಎಂದೆ. ನಾವಿಬ್ಬರು ಪಿಸಪಿಸ ಮಾತಾಡಿದ್ದು ನೋಡಿ ದೊಡ್ಡ ಕುಂಕುಮದ ವ್ಯಕ್ತಿ – 'ಅವರಿಗೆ ಮೂರ್ನಾಲ್ಕು ವರ್ಷದಿಂದ ಹುಣ್ಣಿಮೆಗೆ ದೇವಿ ಮೈಮೇಲೆ ಬರ್ತಿದಾಳೆ, ಆಗ ಅವರು ಹೇಳೋದೆಲ್ಲ ನಿಜ ಆಗುತ್ತೆ, ನಾನು ಬಿಸಿನೆಸ್ಸಲ್ಲಿ ತುಂಬಾ ಲಾಸಾಗಿದ್ದೆ, ಬೀದಿಗೆ ಬಂದ್ಬಿಟ್ಟಿದ್ವಿ, ಇವರಿಂದ ನನ್ನ ಸಮಸ್ಯೆಯೆಲ್ಲ ಪರಿಹಾರ ಆಯ್ತು. ಆಗಿನಿಂದ ಫ್ಯಾಮಿಲಿ ಫ್ರೆಂಡ್ಸು' ಎಂದು ನಮ್ಮ ಅನುಮಾನ ಪರಿಹರಿಸುವವನಂತೆ ಮಾತನಾಡಿದ. ಅಲ್ಲಿಗೆ ಬಂದಿದ್ದವರೆಲ್ಲ, ಮಾತನಾಡಿದರೆ ಎಲ್ಲಿ ದೇವಿ ಶಾಪ ಕೊಟ್ಟುಬಿಡುತ್ತಾಳೋ ಎಂಬಂತೆ ಮೌನವಾಗಿ, ದೊಡ್ಡ ಕುಂಕುಮದವರ ಮಾತಿಗೆ ತಲೆಯಾಡಿಸುತ್ತಿದ್ದರು.

ಹತ್ತು ನಿಮಿಷಗಳ ನಂತರ ಕೈಲೊಂದು ತಟ್ಟೆ ಹಿಡಿದು ಹಸಿರು ಬಾರ್ಡರಿನ ಕೆಂಪು ಕಾಟನ್ ಸೀರೆಯುಟ್ಟು, ಹಣೆ ತುಂಬಾ ಕುಂಕುಮ, ಕೆನ್ನೆ ಪೂರಾ ಅರಿಸಿನ ಬಳಿದುಕೊಂಡು, ನೀರು ಹನಿಯುತ್ತಿದ್ದ ಒದ್ದೆ ಕೂದಲು ಬಿಟ್ಟುಕೊಂಡು, ಎತ್ತರದ ಹೆಂಗಸು ನಸುನಗುತ್ತಾ ಬಂದಳು. ಎಲ್ಲರೂ ಎದ್ದು ನಿಂತದ್ದು ಕಂಡು ನಾನು ಮತ್ತು ಗೀತಾ ಗಡಿಬಿಡಿಯಿಂದ ಮೇಲೆದ್ದೆವು. ಗೀತಾ ಗಂಭೀರವಾಗಿ ಕೈಮುಗಿದು ನಿಂತದ್ದು ಕಂಡು ಅಪ್ರಯತ್ನವಾಗಿ ನಾನೂ ಕೈಜೋಡಿಸಿದೆ. ದೇವಿ ಹೊರಗೆ ಹೋಗಿ ಮನೆಯ ಬಾಗಿಲಿಗೆ ಚೆಂಡು ಹೂವಿನ ಮಾಲೆ ಹಾಕಿ, ಹೊಸಿಲಿಗೆ ಕುಂಕುಮ ಅರಿಸಿನ ಇಟ್ಟು, ತಟ್ಟೆಯಲ್ಲಿದ್ದ ಕುಂಕುಮ ಹಚ್ಚಿದ ನಿಂಬೆಹಣ್ಣಿನ ನಾಲ್ಕು ಹೋಳುಗಳನ್ನು ಹೊಸಿಲ ಮೇಲೆ ಇಟ್ಟು, ಯಾರನ್ನೂ ಮಾತನಾಡಿಸದೇ ಒಳಗೆ ಹೋದಳು.

ಅವಳ ಹಿಂದೆಯೇ ಎಲ್ಲರೂ ಒಳಗೆ ಹೋಗಬೇಕೆಂದು ಇದುವರೆಗೆ ಮೂಕನಂತೆ ಕುಳಿತಿದ್ದ ಅವಳ ಗಂಡ ಸನ್ನೆ ಮಾಡಿದ. ನಾವು ತಂದಿದ್ದ ಪೂಜೆ ಸಾಮಾನುಗಳನ್ನು ದೊಡ್ಡ ಕುಂಕುಮದವನಿಗೆ ಹಸ್ತಾಂತರಿಸಿದೆವು. ಅವಳು ದೇವರ ಕೋಣೆಯಲ್ಲಿದ್ದ ದೊಡ್ಡ ಚಾಮುಂಡೇಶ್ವರಿ ಫೋಟೊಗೆ ಅಲಂಕಾರ ಮಾಡುತ್ತಿದ್ದಳು. ದೇವರಕೋಣೆಯಲ್ಲೂ ಕತ್ತರಿಸಿದ ನಿಂಬೆ ಹಣ್ಣುಗಳ ಮೇಲೆ ಕುಂಕುಮ ಹಾಕಿ ಇಟ್ಟಿದ್ದರು. ಆಕೆ ದೇವರ ಕೋಣೆಯಿಂದ ಹೊರಬಂದು ಕುಳಿತಳು. ದೇವರ ಕೋಣೆಗೂ ನಾವು ನಿಂತಿದ್ದ ಜಾಗಕ್ಕೂ ನಡುವೆ ದೊಡ್ಡ ರಂಗೋಲಿ ಹಾಕಿತ್ತು. ದೊಡ್ಡ ಕುಂಕುಮದವನು ಒಂದೆರಡು ಕಟ್ಟು ಊದಿನ